<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

S.C.98/2023

PW- 05

CW- 16

ಪ್ರ. ಬೋ. ದಿನಾಂಕಃ 21-08-2024

| | | |
|---|---|---|
| ಹೆಸರು ಶ್ರೀ/ ಶ್ರೀಮತಿ | : | ಡಾ. ಸವಿತಾ |
| ತಂದೆ/ ಗಂಡನ ಹೆಸರು | : | ಡಾ. ಮಹೇಶ್ ಎಸ್ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಹಿರಿಯ ವೈದ್ಯಾಧಿಕಾರಿಗಳು , ಹರಿಹರ ಸರ್ಕಾರಿ ಆಸ್ಪತ್ರೆ , |
| ವಾಸ | : | ಹರಿಹರ . |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿ.01-07-2014 ರಿಂದ ಈಗಲೂ ಸಹ ನಾನು ಹರಿಹರದ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ಚಾಸಾ-17 ರಿಂದ 23 ರವರೆಗೆ ನನಗೆ ಗೊತ್ತು. ಅವರೆಲ್ಲರೂ ನಮ್ಮ ಆಸ್ಪತ್ರೆಯ ಸಿಬ್ಬಂದಿಗಳು.

ದಿ.14-05-2023 ರ ರಾತ್ರಿ 10-45 ಗಂಟೆ ಸಮಯದಲ್ಲಿ ನಾನು ತುರ್ತು ಚಿಕಿತ್ಸಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ರಾಜು ಮತ್ತು ಮಾರುತಿ ಎನ್ನುವವರು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದು , ಎಂ ಎಲ್ ಸಿ ಮಾಡಿಸಲು ಬಂದಿದ್ದರು. ಆಗ ಒಂದು ಆಟೋದಲ್ಲಿ ಕೆಲವು ಮಂದಿ ಆಸ್ಪತ್ರೆಗೆ ಬಂದು ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದವರ ಮಧ್ಯ ಮತ್ತು ಆಟೋದಲ್ಲಿ ಬಂದ ವ್ಯಕ್ತಿಗಳ ಮಧ್ಯ ಗಲಾಟೆ ಪ್ರಾರಂಭವಾಗಿದ್ದು , ಮೊದಲು ಬಂದ ವ್ಯಕ್ತಿಗಳಲ್ಲಿ ಕೇಸರಿ ಶರ್ಟ್ ಹಾಕಿದವರು ಚಾಕುವಿನಿಂದ ನೀಲಿ ಬಣ್ಣದ ಶರ್ಟ್ ಹಾಕಿದವರಿಗೆ ಚಾಕುವಿನಿಂದ ಚುಚ್ಚಿದರು.

2 ನೇ ಸಾರಿ ಬಂದ ವ್ಯಕ್ತಿಗಳಲ್ಲಿ ಅವರ ಜೊತೆ ಅವರ ಪತ್ನಿ ಬಂದಿದ್ದರು. ಆ ಗಾಲಟೆಯಲ್ಲಿ ಇನ್ನೊಬ್ಬರಿಗೂ ಸಹ ಗಾಯ ಆಯಿತು. ಕುಮಾರ ಮತ್ತು ಫಕ್ಕಿರಪ್ಪ ಇವರಿಗೆ

ಗಾಯವಾಯಿತು. ಕಮಾರ ಈತನ ಕತ್ತು ಪೂರ್ತಿ ಕೊಯ್ದಿತ್ತು ಆ ಸಮಯದಲ್ಲಿ ರಕ್ತ ಕೆಳಗಡೆ ಹರಿಯಿತು. ಆತ ಕೆಳಗಡೆ ಕುಸಿದು ಬಿದ್ದ. ಸದರಿ ಕುತ್ತಿಗೆಯಲ್ಲಿನ ಮುಖ್ಯ ರಕ್ತನಾಳ ಕತ್ತರಿಸಿ ರಕ್ತಸ್ರಾವವಾಗಿ ಕುಸಿದು ಕೆಳಗಡೆ ಬಿದ್ದ. ನಂತರ ಅಂಬುಲನ್ಸನ ಮುಖಾಂತರ ಚಾಲಕ ನಾಗರಾಜ್ ಮತ್ತು ಡಿ ದರ್ಜೆ ನೌಕರ ವಿರೇಂದ್ರ ಇವರ ಮೂಖಾಂತರ ಹೆಚ್ಚಿನ ಚಿಕಿತ್ಸೆಗೆ ದಾವಣಗೆರೆ ಸಿಜಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು. ನಂತರ ಅಂಬುಲನ್ಸನಲ್ಲಿ ಹೋದ ನಮ್ಮ ಸಿಬ್ಬಂದಿ ವಾಪಸ್ ನಮ್ಮ ಆಸ್ಪತ್ರೆಗೆ ಬಂದಾಗ ಮಾರ್ಗ ಮಧ್ಯದಲ್ಲಿ ಕಮಾರ್ ಈತ ಮರಣ ಹೊಂದಿರುತ್ತಾನೆ ಎಂದು ತಿಳಿಸಿರುತ್ತಾರೆ.

ನಮ್ಮ ಆಸ್ಪತ್ರೆಯಲ್ಲಿ ಆ ದಿನ ನಮ್ಮ ಸಿಬ್ಬಂದಿಗಳಾದ ಚಾಸಾ-17 ಶ್ವೇತಾ, ಚಾಸಾ-18 ಸುಮಂಗಳ, ಚಾಸಾ-19 ಪದ್ಮಜಾ, ವಿರೇಂದ್ರ, ಚಾಸಾ-23 ಅನುಸುಯಮ್ಮ, ಸೆಕ್ಯುರಿಟಿ ಬಸವರಾಜ್, ಹರೀಶ್ ಇದ್ದರು. ಘಟನೆಯಾಗಿದೆ ಎಂದು ಹೇಳುವ ಸಮಯದಲ್ಲಿ ನಾವು ಹೆದರಿ ಪಕ್ಕದಲ್ಲಿ ನಿಂತಿದ್ದೇವು.

ಆ ದಿನ ನಮ್ಮ ಆಸ್ಪತ್ರೆಗೆ ಎರಡು ಜನ ಎಂ ಎಲ್ ಸಿ ಮಾಡಲು ಬಂದ ವ್ಯಕ್ತಿಗಳನ್ನು ಮತ್ತು ಹಲ್ಲೆ ಮಾಡಿದಂತಹ ವ್ಯಕ್ತಿಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸದರಿ ವ್ಯಕ್ತಿಗಳು ನ್ಯಾಯಾಲಯದ ಮುಂದೆ ಇರುವ ಆರೋಪಿತರಾಗಿರುತ್ತಾರೆ.

ಪೊಲೀಸರು ನಮ್ಮನ್ನು ಹರಿಹರ ನ್ಯಾಯಾಧೀಶರ ಮುಂದೆ ಕರೆದುಕೊಂಡು ಹೋಗಿದ್ದು, ಆ ಪ್ರಕಾರ ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ. ಸದರಿ ಹೇಳಿಕೆ ನೋಡುತ್ತಿದ್ದು , ಅದನ್ನು ನಿಪಿ.11 ಎಂದು ಗುರುತಿಸಲಾಯಿತು. (ಹರಿಹರ ನ್ಯಾಯಾಧೀಶರಿಂದ ಫಕ್ಕಿರಪ್ಪ, ಡಾ. ಸವಿತಾ , ಒಟ್ಟು ಎಂಟು ಜನರ ದಂಡ ಪ್ರಕ್ರಿಯಾ ಸಂಹಿತೆ ಕಲಂ.164 ರ ಅಡಿಯಲ್ಲಿ ಹೇಳಿಕೆ ಮಾಡಿದ್ದು, ಶೀಲ್ಡ್ ಕವರ್ ನಿಂದ ನ್ಯಾಯಾಲಯಕ್ಕೆ ಕಳುಹಿಸಿದ್ದು , ಸದರಿ ಶೀಲ್ಡಕವರನ್ನು ಉಭಯ ವಕೀಲರು ಹಾಗೂ ಆರೋಪಿತರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ಒಡೆದು ನೋಡಲಾಯಿತು.) ಸದರಿ ಮೂಲ ದಾಖಲೆಯನ್ನು ನೋಡಲಾಗಿ, ಅದನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಕವರ್ ನ್ನುನಿಪಿ.11(ಬಿ) ಎಂದು ಗುರುತಿಸಲಾಯಿತು.

ಆ ದಿನ ಹಲ್ಲೆಗೆ ಒಳಗಾದ ವ್ಯಕ್ತಿಗೆ ಸಂಬಂಧಪಟ್ಟಂತೆ ನಿಪಿ.2 ಫೋಟೋವನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಫೋಟೋ ನೋಡಿ , ಸದರಿ ವ್ಯಕ್ತಿ ಹಲ್ಲೆಗೆ ಒಳಗಾದ ವ್ಯಕ್ತಿ ಎಂದು

ಉತ್ತರಿಸಿರುತ್ತಾರೆ. ಹಲ್ಲೆಗೆ ಒಳಗಾದ ಇನ್ನೊಬ್ಬ ಗಾಯಾಳು ಫಕ್ಕಿರಪ್ಪ ನನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿಯ ಜೊತೆ ಬಂದಂತಹ ಮಹಿಳೆ ನಿಪಿ.2 ಫೋಟೋದಲ್ಲಿ ಅನುಕ್ರಮ ನಂ1 ಎಂದು ಗುರುತಿಸಿದ್ದು , ಅವರೇ ಇರುತ್ತಾರೆ , ಹಾಗೂ ಸದರಿ ಮಹಿಳೆ ಇಂದು ನ್ಯಾಯಯಾಲಯದ ಮುಂದೆ ಹಾಜರಿರುತ್ತಾರೆ.

ಆ ದಿನ ಹಲ್ಲೆಗೆ ಬಳಸಿದ ವಸ್ತುವನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಮು.ಮಾ.3 ನ್ನು ತೋರಿಸಲಾಗಿ ಸಾಕ್ಷಿ ನೋಡಿ ಇದೇ ವಸ್ತು ಆಗಿರುತ್ತದೆ ಎಂದು ಉತ್ತರಿಸಿರುತ್ತಾರೆ.

ಒಬ್ಬ ವ್ಯಕ್ತಿಗೆ ಇಬ್ಬರು ಜನ ಹೆಂಡತಿಯರು ಇದ್ದು ಆಸ್ತಿ ವಿಚಾರವಾಗಿ ಗಲಾಟೆಯಾಗಿದೆ ಎಂದು ನಂತರ ನಮಗೆ ತಿಳಿದು ಬಂತು.

ನಿಪಿ.5 ಫೋಟೋದಲ್ಲಿ ಇರುವ ಸ್ಥಳ ಗಲಾಟೆಯಾದ ಸ್ಥಳ. ಫೋಟೋದಲ್ಲಿ ಕಾಣುವ ಕುರ್ಚಿ ನಾನು ಕುಳಿತುಕೊಳ್ಳುವ ಸ್ಥಳವಾಗಿರುತ್ತದೆ. ಅದು ಸರ್ಕಾರಿ ಆಸ್ಪತ್ರೆಯಾಗಿರುತ್ತದೆ.

<u>ಪಾಟೀಸವಾಲುಃ-</u> ಆರೋಪಿತರಪರ ಶ್ರೀ ಬಿ ಪಿವಕೀಲರಿಂದ.

ಎಂ.ಎಲ್.ಸಿ. ರಿಜಿಸ್ಟರ್ನಲ್ಲಿ ಎಂ.ಎಲ್.ಸಿ. ಮಾಡಿಸಲು ಬಂದಂತಹ ರೋಗಿಯ ಜಾತಿಯನ್ನು ಸಹ ನಮೂದು ಮಾಡುತ್ತೇವೆ. ಸದರಿ ರಿಜಿಸ್ಟರ್ ನಲ್ಲಿ ಜಾತಿ ನಮೂದು ಮಾಡಲು ಪ್ರತೇಕ ಕಾಲಮ್ ಇರುವುದಿಲ್ಲ. ರಾತ್ರಿ 10-45 ಗಂಟೆಗೆ ನಮ್ಮ ಆಸ್ಪತ್ರೆಗೆ ಎಂ ಎಲ್ ಸಿ ಮಾಡಿಸಲು ಬಂದ ಇಬ್ಬರು ವ್ಯಕ್ತಿಗಳು ಯಾವ ಬಗ್ಗೆ ಹಾಕಿದ್ದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಒಬ್ಬರು ಬಟ್ಟೆ ಹಾಕಿದ್ದು ಮಾತ್ರ ನೆನಪಿದೆ ಇನ್ನೊಬ್ಬರದು ನೆನಪಿಲ್ಲ ಎಂದು ನುಡಿದಿರುತ್ತಾರೆ. ಸದರಿ ಸಮಯದಲ್ಲಿ ಬಂದ ತಕ್ಷಣ ನಾವು ಎಂ ಎಲ್ ಸಿ ರಿಜಿಸ್ಟರ್ ಮಾಡಿದ್ದೇವು. ಎಂ ಎಲ್ ಸಿ ಮಾಡಲು ಐದು ನಿಮಿಷ ಬೇಕಾಗುತ್ತದೆ. ನಮ್ಮ ಆಸ್ಪತ್ರೆಯಲ್ಲಿ ಪೊಲೀಸರಿಗೆ ಮಾಹಿತಿ ನೀಡುವ ರಿಜಿಸ್ಟರ್ ಪ್ರತ್ಯೇಕವಾಗಿದೆ ಮತ್ತು ಎಂ ಎಲ್ ಸಿ ರಿಜಿಸ್ಟರ್ ಮಾಡಲು ಪ್ರತ್ಯೇಕವಾದ ರಿಜಿಸ್ಟರ್ ಇದೆ. ಮೊದಲು ಯಾವ ರಿಜಿಸ್ಟರ್ ಬರೆದಿರುತ್ತೇವೆ ಎಂದು ಹೇಳಲು ಈಗ ನೆನಪಿಲ್ಲ. ಮೊದಲು ಒಬ್ಬರ ವಿವರ ಬರೆದೆವು , ನಂತರ ಇನ್ನೊಬ್ಬರದು ಬರೆದೆವು. ಒಂದು ಎಂ ಎಲ್ ಸಿ ರಿಜಿಸ್ಟರ್ ಬರೆದ ನಂತರ ಆಟೋದಿಂದ ಇನ್ನೊಬ್ಬರು ಬಂದರು.

ಆಟೋದಿಂದ ಬಂದ ಮೂರು ಜನರಲ್ಲಿ ಒಬ್ಬ ನೀಲಿ ಶರ್ಟ್ ಹಾಕಿದ್ದರು, ಇನ್ನೊಬ್ಬರು ಬನಿಯನ್ ನಲ್ಲಿ ಬಂದಿದ್ದರು, ಇನ್ನೊಬ್ಬ ಮಹಿಳೆ ನೀಲಿ ಬಣ್ಣದ ಚೂಡಿದಾರ ಧರಿಸಿದ್ದರು. ಎಂ ಎಲ್ ಸಿ ರಿಜಿಸ್ಟರ್ ಮಾಡುವಾಗ ನನ್ನ ಜೊತೆ ನಮ್ಮ ಸಿಬ್ಬಂದಿ ಪದ್ಮಜಾ ಮತ್ತು ವಿರೇಂದ್ರ ಇದ್ದರು.

ಹರಿಹರದ ಸರ್ಕಾರಿ ಆಸ್ಪತ್ರೆ 100 ಹಾಸಿಗೆಯುಳ್ಳ ಆಸ್ಪತ್ರೆ ಇರುತ್ತದೆ. 66 ಹಳ್ಳಿಗಳನ್ನು ಹೊಂದಿದ ಹರಿಹರ ತಾಲ್ಲೂಕು ದೊಡ್ಡ ತಾಲ್ಲೂಕು. ಅಲ್ಲಿ 10 ನಿಮಿಷಕ್ಕೆ ಒಂದು ಎಮರ್ಜನ್ಸಿ ಕೇಸುಗಳು ಬರುತ್ತಿರುತ್ತವೆ. ಅಂತಹ ರೋಗಿಗಳನ್ನು ವಾರ್ಡಿಗೆ ಕಳುಹಿಸಿಕೊಡುತ್ತೇವೆ. ಹೆರಿಗೆ ವಾರ್ಡ್ , ಜನರಲ್ ವಾರ್ಡ್ , ಒಟ್ಟು ಹತ್ತು ವಾರ್ಡ್ ಗಳು ಇರುತ್ತವೆ.

ನರ್ಸ್ ಗಳಿಗೆ ಎಲ್ಲಿ ಎಲ್ಲಿ ಕೆಲಸ ಇರುತ್ತದೋ ಅಲ್ಲಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆದರೆ ಹೆರಿಗೆ ವಾರ್ಡಿನಲ್ಲಿ ರೋಗಿಗಳು ಇಲ್ಲದಿದ್ದಾಗ ಮುಂದೆ ಬಂದು ಇರುತ್ತಾರೆ. ಆ ದಿನ ನಮ್ಮ ಆಸ್ಪತ್ರೆಯಲ್ಲಿ ಯಾವ ಯಾವ ವಾರ್ಡಿನಲಿ ಎಷ್ಟು ಎಷ್ಟು ರೋಗಿಗಳು ಇದ್ದರು ಎಂದು ಈಗ ಹೇಳಲು ಆಗುವುದಿಲ್ಲ, ಹರಿಹರ ತಾಲ್ಲೂಕು ದೊಡ್ಡ ತಾಲ್ಲೂಕು ಆಗಿರುವುದರಿಂದ ಎಲ್ಲಾ ವಾರ್ಡ್ ಗಳಲ್ಲಿ ರೋಗಿಗಳು ಇರುತ್ತಾರೆ.

ಎಮರ್ಜನ್ಸಿ ವಾರ್ಡ್ ಗೆ ಮುಖ್ಯ ದ್ವಾರದಿಂದ ಬಂದಾಗ ಎದುರುಗಡೆ ಒಂದು ಚೇರ್, ಒಂದು ಟೇಬಲ್ ಇದೆ , ಹಾಗೂ ಗಾಯಾಳು ಕುಳಿತುಕೊಳ್ಳಲು ಸಹ ಒಂದು ಸ್ಟೂಲ್ ಇದೆ. ಅಲ್ಲಿ ಸಿಬ್ಬಂದಿಗಳು ಕುಳಿತುಕೊಳ್ಳಲು ವಿಶೇಷವಾದ ಕುರ್ಚಿ ಇರುವುದಿಲ್ಲ. ಕ್ಯಾಸುಯಲಟಿ ಸಿಬ್ಬಂದಿ ವರ್ಗದವರು ತುರ್ತು ಚಿಕಿತ್ಸಾ ಘಟಕದಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ – ನನ್ನ ಹತ್ತಿರ ಸಹ ಬಂದಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

ಆ ದಿನ ನಮ್ಮ ಆಸ್ಪತ್ರೆಗೆ ಎಂ ಎಲ್ ಸಿ ಮಾಡಲು ಬಂದ ಯಾವ ಯಾರ ಕೈಯಲ್ಲಿ ಏನು ಏನು ಇತ್ತು ಎಂದು ನನಗೆ ಗೊತ್ತಿಲ. ಮೊದಲು ಎಂ ಎಲ್ ಸಿ ಮಾಡಿದ ವ್ಯಕ್ತಿಯ ಕೈಯಲ್ಲಿ ಚಾಕು ಇರಲಿಲ್ಲ. ಮುಖ್ಯ ದ್ವಾರದಿಂದ ಒಳಗಡೆ ಬಂದಾಗ ಒಂದು ವೈದ್ಯಾಧಿಕಾರಿಗಳ ರೂಮ್ , ಆ ನಂತರ ತುರ್ತು ಘಟಕದ ಸಿಬ್ಬಂದಿ ರೂಮ್ , ಆ ನಂತರ ಪ್ಯಾಸೇಜ್ , ನಂತರ ವಾರ್ಡ್ ಇದೆ, ಅದರ ಎಡಭಾಗದಲ್ಲಿ ವೈದ್ಯಾಧಿಕಾರಿಗಳ ವಿಶ್ರಾಂತಿ ಕೊಠಡಿ , ನಂತರ ಓಪಿಡಿಗೆ ಹೋಗಲು ಪ್ಯಾಸೇಜ್ ಇದೆ. ಕ್ಯಾಸುಯಲಟಿ ರೂಮಿನ

ಎದುರು ಕರ್ತವ್ಯದಲ್ಲಿರುವ ವೈದ್ಯರು ಕಳಿತುಕೊಳ್ಳುವ ಕುರ್ಚಿ ಇದೆ. ರಿಸಪ್ಷನ್‌ನಲ್ಲಿ ಓಪಿಡಿ ಚೀಟಿ ಮಾಡುತಾರೆ. ಎಂ ಎಲ್ ಸಿ ರಿಜಿಸ್ಟರ್ ಕ್ಯಾಸುಯಲ್ಟಿ ರೂಮಿನಲ್ಲಿರುತ್ತದೆ. ರಿಸಪ್ಷನ್‌ನಲ್ಲಿ ಇರುವುದಿಲ್ಲ. ಎಂ ಎಲ್ ಸಿ ರಿಜಿಸಟ್‌ರ್ ಮಾಡಿಸಲು ಬಂದಾಗ ಓಪಿಡಿ ಚೀಟಿ ಮಾಡಿಸಿದ ಬಗ್ಗೆ ಎಂ ಎಲ್ ಸಿ ರಿಜಿಸ್ಟರ್ ನೋಡಿ ಹೇಳಬಹುದು. ಸಾಕ್ಷಿ ರಿಜಿಸ್ಟರಿ ನೋಡಿ ಮಾಡಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಓಪಿಡಿ ಚೀಟಿಯನ್ನು ಪೂಲೀಸರಿಗೆ ಕೊಟ್ಟಿದ್ದೇನೋ ಇಲ್ಲವೋ ಗೊತ್ತಿಲ್ಲ, ಎರಡೂ ಓಪಿಡಿ ಚೀಟಿ ಒಂದೇ ಒರುತ್ತದೆ ಎನ್ನುವುದು ನಿಜ. ಒಬ್ಬೊಬ್ಬ ರೋಗಿಗೆ ಒಂದೋಂದು ಓಪಿಡಿ ಚೀಟಿ ಮಾಡಿ ಕೊಡುತ್ತೇವೆ ಓಪಿಡಿ ಚೀಟಿಯಲ್ಲಿ ಮಾರುತಿ ಎಂದು ಬರೆಯಲಾಗಿದ್ದು , ಅದನ್ನು ಹೊಡೆದು ಹಾಕಿ ಮಾರುತಿ ಎಂದು ಬರೆಯಲಾಗಿದೆ ಎನ್ನುವುದು ನಿಜ. ಸದರಿ ಓಪಿಡಿ ರಿಜಿಸ್ಟರ್ ನಲ್ಲಿ 80 ಅಂತಾ ಬರೆದು ನಂತರ 88 ಎಂದು ಪಲ್ಸರೇಟ್ ತಿದ್ದು ಪಡಿ ಮಾಡಲಾಗಿದೆ. ಓಪಿಡಿ ರಿಜಿಸ್ಟರ್ ನಲ್ಲಿ ಪಲ್ಸ ರೇಟ್, ಆರ್ ಆರ್, ಸೈಜ್ ಎರಡರಲ್ಲೂ ನಾರ್ಮಲ್ ಎಂದು ಬರೆಯಾಗಿದೆ. ಬಿ ಪಿ ಮತ್ತು ಪಲ್ಸ ರೇಟ್ ಬೇರೆ ಬೇರೆ ಇರುತ್ತದೆ. ಎರಡೂ ಓಪಿಡಿ ಚೀಟಿಗಳಲ್ಲಿ ಪಲ್ಸ ರೇಟ್ 80 , ಎಸ್ ಪಿ ಓ–98, ಆರ್ ಆರ್–18 ಅಂತಾ ಬರೆಯಲಾಗಿದೆ. ಇನ್ನೊಂದು ಓಪಿಡಿಯಲ್ಲಿ ಪಲ್ಸ ರೇಟ್ 88 ರಲ್ಲಿ ಒಂದು ಎಂಟು ಅಂಕಿಯನ್ನು ತಿದ್ದಿ ಬರೆಯಲಾಗಿದೆ ಎನ್ನುವುದು ಸರಿ. ಎರಡನೇ ಓಪಿಡಿ ಚೀಟಿಯನ್ನು ನಾವು ಸೃಷ್ಟನೆ ಮಾಡಿರುತ್ತೇವೆ ಎನ್ನುವುದು ಸುಳ್ಳು.

ಗಲಾಟೆಯಾಗಿದೆ ಎಂದು ಹೇಳುವ ಸಮಯದಲ್ಲಿ ಕ್ಯಾಸುಯಲ್‌ಟಿ ವಾರ್ಡಿನಲ್ಲಿರುವ ರೋಗಿಗಳ ಸಂಬಂಧಿಕರು ಇದ್ದರು ಮತ್ತು ಎಲ್ಲರೂ ಸೇರಿದ್ದರು. ಆ ಸಮಯಕ್ಕೆ ಸುಮಾರು 25 ಜನ ಸೇರಿರಬಹುದು. ಗಲಾಟೆಯಾದಾಗ ಯಾರು ಯಾರಿಗೆ ಏನಂತ ಬೈದರು ಮತ್ತು ಯಾರು ಯಾರಿಗೆ ಏನು ಮಾಡಿದರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಏನಂತ ಬೈದಾಡಿದ್ದು ಗೊತ್ತಿಲ್ಲ, ಆದರೆ ಚಾಕು ಹಾಕಿದ್ದನ್ನು ನೋಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಚಾಕುವನ್ನು ಯಾರು ಎಲ್ಲಿಂದ ತಂದಿದ್ದಾರೆ ಎಂದು ನಾನು ನೋಡಿಲ್ಲ.

(ನ್ಯಾಯಾಲಯದ ಮುಂದೆ ಇರುವ ಟೀ ಶರ್ಟ್ ಮತ್ತು ಶರ್ಟ್ ಶೀಲ್ಡ ಕವರ್ ನಲ್ಲಿದ್ದು, ಶೀಲ್ಡ ಕವರ್ ನ್ನು ಒಡೆದು ಸಾಕ್ಷಿಗೆ ತೋರಿಸಲು ಅನುಮತಿ ನೀಡಲಾಯಿತು.)

ನ್ಯಾಯಾಲಯದ ಮುಂದೆ ಇರುವ ಮೂರು ಶರ್ಟ್‌ಗಳನ್ನು ಸಾಕ್ಷಿಗೆ ತೋರಿಸಿ ಕೇಸರಿ ಕಲರ್ ಶರ್ಟ ಇರುವುದಿಲ್ಲ ಎಂದು ಕೇಳಲಾಗಿ , ಸಾಕ್ಷಿ ನ್ಯಾಲಯಾಲಯದ ಮುಂದೆ ಇರುವ ಶರ್ಟ್ ತೋರಿಸಿ , ಅದು ಕೇಸರಿ ಕಲರ್ ಶರ್ಟ್ ಇದ್ದು , ಅದನ್ನು ಮು.ಮಾ.4 ಎಂದು

ಗುರುತಿಸಲಾಯಿತು. ಮು.ಮಾ.4 ಕೇಸರಿ ಕಲರ್ ಆಗಿರುತ್ತದೆ , ಹಳದಿ ಕಲರ್ ಆಗಿರುವುದಿಲ್ಲ, ಮು.ಮಾ.4 ಹಳದಿ ಕಲರ್ ಆಗಿದ್ದರು ಸಹ ಕೇಸರಿ ಕಲರ್ ಇರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸುಳ್ಳು. ಮು.ಮಾ.4 ಹಳದಿ ಮತ್ತು ಕರಿ ಬಣ್ಣದು ಇರುತ್ತದೆ ಎಂದು ಹೇಳಿದ ಪ್ರಶ್ನೆಗೆ ಸಾಕ್ಷಿ – ಕೇಸರಿ ಮತ್ತು ಕರಿ ಬಣ್ಣದ ಶರ್ಟ್ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಪೊಲೀಸರ ಮಾತು ಕೇಳಿ ಕೇಸರಿ ಕಲರ್ ಶರ್ಟ್ ಇರುತ್ತದೆ ಎಂದು ಹೇಳಿರುವುದರಿಂದ ಈಗ ನ್ಯಾಯಾಲಯದ ಮುಂದೆ ಇರುವ ಮು.ಮಾ.4 ಹಳದಿ ಬಣ್ಣದು ಇದ್ದರೂ ಸಹ ಕೇಸರಿ ಬಣ್ಣದ್ದು ಇರುತ್ತದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ದಿವಸ ಯಾರು ಯಾರು ಯಾವ ಯಾವ ಬಟ್ಟೆ ಗಳನ್ನು ಹಾಕಿಕೊಂಡು ಬಂದಿದದರು ಎಂಬುದನ್ನು ನಾನು ನೋಡಿಲ್ಲ ಎನ್ನುವುದು ಸರಿಯಲ್ಲ.

ಆ ದಿನ ಕುಮಾರ್ ಈತನು ಹಾಕಿಕೊಂಡ ಬಂದು ಶರ್ಟ್ ಯಾವುದು ಎಂದು ಕೇಳಿದಾಗ ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಶರ್ಟನ್ನು ತೋರಿಸಿದ್ದು , ಅದನ್ನು ಮು.ಮಾ.5 ಎಂದು ಗುರುತಿಸಲಾಯಿತು. ಮು.ಮಾ.5 ನೀಲಿ ಬಣ್ಣದ ಶರ್ಟ್ ಆಗಿರುವುದಿಲ್ಲ ಅದು ಪಾಚಿಹಸಿರು ಬಣ್ಣದ್ದಾಗಿದೆ ಎನ್ನುವುದು ಸುಳ್ಳು.

ಸದರಿ ಘಟನೆಗೆ ಸಂಬಂಧಪಟ್ಟಂತೆ ನಮ್ಮ ಆಸ್ಪತ್ರೆಯಿಂದ ಫೋನ್ ಮುಖಾಂತರ ಮಾಹಿತಿ ನೀಡಿದ್ದು , ಯಾವ ಸಿಬ್ಬಂದಿ ಮಾಹಿತಿ ನೀಡಿರುತ್ತಾರೆ ಗೊತ್ತಿಲ್ಲ. ಆಗ ಸಮಯ ಎಷ್ಟು ಗಂಟೆಯಾಗಿತ್ತು ಎಂದು ನನಗೆ ಗೊತ್ತಿಲ್ಲ, ಗಲಾಟೆಯಾಗುತ್ತಿದ್ದ ಸಮಯದಲ್ಲಿ ಫೋನ್ ಮಾಡಲಾಗಿರುತ್ತದೆ. ನಮ್ಮ ಆಸ್ಪತ್ರೆಯಿಂದ ಪೊಲೀಸ್ ಠಾಣೆ ಒಂದುವರೆ ಕಿ.ಮೀ ದೂರ ಇದೆ. ಜೀಪಿನ ಮೂಲಕ ಠಾಣೆಯಿಂದ ಮೂರು ನಿಮಿಷದಲ್ಲಿ ಆಸ್ಪತ್ರೆಗೆ ಬರಬಹುದು. ಫೋನ್ ಮಾಡಿ ಎಷ್ಟು ನಿಮಿಷದ ನಂತರ ಪೊಲೀಸರು ಸ್ಥಳಕ್ಕೆ ಬಂದರು ಎಂದು ಹೇಳಲು ಆಗುವುದಿಲ್ಲ. ನಮ್ಮ ಆಸ್ಪತ್ರೆಯಿಂದ ದಾವಣಗೆರೆ ಆಸ್ಪತ್ರೆಗೆ ಅಂಬುಲನ್ಸನಲ್ಲಿ ಕಳುಹಿಸಿಕೊಟ್ಟ ನಂತರ ಪೊಲೀಸರು ಆಸ್ಪತ್ರೆಗೆ ಬಂದರು. ಕಳುಹಿಸಿಕೊಟ್ಟ ಐದು ನಿಮಿಷದಲ್ಲಿ ಆಸ್ಪತೆರಗೆ ಬಂದರು. ಆದರೆ ನಿಖರವಾಗಿ ಸಮಯ ಹೇಳಲು ಆಗುವುದಿಲ್ಲ.

2 ನೇ ಓಪಿಡಿಯನ್ನು ಮೊದಲು ಪ್ರಾರಂಭ ಮಾಡಿದ್ದೇವು, ಪೊಲೀಸರು ಬಂದ ನಂತರ ಅದನ್ನು ಸಂಪೂರ್ಣ ಮುಗಿಸಿರುತ್ತೇವೆ. 2 ನೇ ಓಪಿಡಿಯಲ್ಲಿ ರಕ್ತಕಲೆಯಾಗಿದ್ದರ

ಬಗ್ಗೆ ನಮೂದು ಮಾಡಿರಲಿಲ್ಲ ಕಾರಣ ಗಾಯಗಳು ಇರಲಿಲ್ಲ. ರಕ್ತ ಕಲೆಯಿದ್ದ ಬಗ್ಗೆ ನಮೂದು ಮಾಡಿಲ್ಲ. ಪೊಲೀಸರು ಬಂದ ನಂತರ ಘಟನೆಯ ಬಗ್ಗೆ ಏನಾಯಿತು ಎಂದು ಕೇಳಿದರು , ನಾನು ಹೇಳಿರುತ್ತೇನೆ. ಘಟನೆಯಾಗಿದೆ ಅಂತಾ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ದೂರು ಕೊಟ್ಟಿಲ್ಲ. ಇಬ್ಬರೂ ಹೋಗಿರುವುದರಿಂದ ನಾನು ದೂರುಕೊಡಲು ಹೋಗಿರುವುದಿಲ್ಲ ಹಾಗೂ ಪೊಲೀಸರು ಹೇಳಿಕೆ ಪಡೆದಿದ್ದರಿಂದ ನಾನು ದೂರು ಕೊಡಲು ಹೋಗಲಿಲ್ಲ. ಪಿಎಸ್ಐ ರವರು ಸ್ಥಳಕ್ಕೆ ಬಂದಿದ್ದರಿಂದ ನಾನು ಸುಮ್ಮನಾದೆ. ಮೊದಲು ಎಸ್ ಐ ಬಂದರು , ಸ್ವಲ್ಪ ಸಮಯದಲ್ಲಿ ಪ್ರೆಬೇಶನರಿ ಎಸ್ ಪಿ ಬಂದರು. ಪ್ರೇಶನರಿ ಎಸ್ ಪಿ ರವರು ಎಪ್ ಐ ಬಂದ ನಂತರ ಎಷ್ಟು ಸಮಯದ ನಂತರ ಬಂದರು ಎಂದು ಹೇಳಲು ಆಗುವುದಿಲ್ಲ. ಎಸ್ ಐ ರವರು ಸ್ಥಳದಲ್ಲಿ ಬಿದ್ದ ಚಪ್ಪಲಿ ಮತ್ತು ರಕ್ತದ ಮಾದರಿ ತೆಗೆದುಕೊಂಡು ಹೋದರು. ಪೊಲೀಸರು ಮಹಜರ್ ಮಾಡಿ ಚಪ್ಪಲಿ ಮತ್ತು ರಕ್ತದ ಮಾದರಿ ತೆಗೆದುಕೊಂಡು ಹೋದರು. ಆದರೆ ಸಮಯ ಎಷ್ಟಾಗಿತ್ತು ಎಂದು ಗೊತ್ತಿಲ್ಲ. ಎಸ್ ಐ ರವರು ಒಂದು ಗಂಟೆ ಅಲ್ಲಿ ಇದ್ದರು, ಆ ಅವಧಿಯಲ್ಲಿ ತೆಗೆದುಕೊಂಡು ಹೋದರು. ಮಾರುತಿ ಮತ್ತು ರಾಜು ರವರನ್ನು ಪೊಲೀಸರು ತಮ್ಮ ಜೊತೆ ಕರೆದುಕೊಂಡು ಹೋದರು. 2 ನೇ ಓಪಿಡಿ ಯನ್ನು ಮುಕ್ತಾಯ ಮಾಡುವ ಸಮಯದಲ್ಲಿ ಪೊಲೀಸರ ಸಹಿ ಪಡೆದಿಲ್ಲ. ಪೊಲೀಸರು ಬಂದ ವಿಚಾರವನ್ನು ಓಪಿಡಿ ಯಲ್ಲಿ ನಮೂದು ಮಾಡಿಲ್ಲ.

ಸಾಮಾನ್ಯವಾಗಿ ಒಬ್ಬ ರೋಗಿ ಆಸ್ಪತ್ರೆಗೆ ಬಂದಾಗ ಓಪಿಡಿ ರಿಜಿಸ್ಟರ್ ಮಾಡಿ, ಎಂ.ಎಲ್.ಸಿ. ರಿಜಿಸ್ಟರ್ ಮಾಡಿ , ಪ್ರಾಥಮಿಕ ಚಿಕಿತ್ಸೆ ನಾವು ನೀಡುತ್ತೇವೆ. ಸದರಿ ಚಿಕಿತ್ಸೆ ನೀಡಿದ್ದರ ಬಗ್ಗೆ ಎಂ ಎಲ್ ಸಿ ರಿಜಿಸ್ಟರ್ ನಲ್ಲಿ ನಮೂದು ಮಾಡಬೇಕು ಎನ್ನುವುದು ನಿಜ. ಆ ರೋಗಿ ಎಂ.ಎಲ್.ಸಿ ಮಾಡಿಸಲು ಬಂದಿದ್ದೇವೆ ಅಂತಾ ಹೇಳಿದಲ್ಲಿ ಮಾತ್ರ ನಮೂದು ಮಾಡುತ್ತೇವೆ. ಹಲ್ಲೆಗೆ ಒಳಗಾಗಿ ಚಿಕಿತ್ಸೆ ಪಡೆಯಲು ಬಂದ ರೋಗಿಗೆ ಓಪಿಡಿ ಮಾಡಿಸದಿದ್ದಲ್ಲಿ ಅಥವಾ ಎಂ ಎಲ್ ಸಿ ರಿಜಿಸ್ಟರ್ ಮಾಡಿಸದಿದ್ದರೂ ಸಹ ನಾವು ಪ್ರಾಥಮಿಕ ಚಿಕಿತ್ಸೆ ನೀಡಿದ ಬಗ್ಗೆ ನಮೂದು ಮಾಡಬೇಕು ಎನ್ನುವುದು ನಿಜ.

ಕುಮಾರ ಮತ್ತು ಫಕ್ಕಿರ ಇವರಿಗೆ ಪ್ರಥಮ ಚಿಕಿತ್ಸೆ ನೀಡಿದ ಬಗ್ಗೆ ಎಂ ಎಲ್ ಸಿ ರಿಜಿಸ್ಟರ್ ನಲ್ಲಿ ನಮೂದು ಮಾಡಿಲ್ಲ, ಕಾಲಾವಕಾಶ ಇಲ್ಲದೆಯಿದ್ದದ್ದರಿಂದ ನಾನು ನಮೂದು

ಮಾಡಿಲ್ಲ. ರೋಗಿಯನ್ನು ದಾವಣಗೆರೆ ಆಸ್ಪತ್ರೆಗೆ ಕಳುಹಿಸಿದಾಗ ನಾವು ಎಂ ಎಲ್ ಸಿ ರಿಜಿಸ್ಟರ್ ಮಾಡಿಲ್ಲ ಎಂದು ಹೇಳಲು ಹೇಳಿ ಕಳುಹಿಸಿದ್ದೆ . ಪ್ರಥಮ ಚಿಕಿತ್ಸೆ ನೀಡಿದ ಬಗ್ಗೆ ನಮ್ಮ ಆಸ್ಪತ್ರೆಯ ದಾಖಲಾತಿಗಳಲ್ಲಿ ನಮೂದು ಮಾಡಿಲ್ಲ, ಆದರೆ ಮೌಖಿಕವಾಗಿ ತಿಳಿಸಿರುತ್ತೇನೆ. ಗಾಯಾಳುವನ್ನು ಅಂಬುಲನ್ಸ ಮೂಲಕ ಕಳುಹಿಸಿಕೊಟ್ಟಿದ್ದು , ಅದಕ್ಕೆ ಸಂಬಂಧಪಟ್ಟಂತೆ ದಾಖಲೆ ಇದ್ದು , ಆ ದಾಖಲೆ ನೋಡಿ ಹೇಳಬೇಕಾಗುತ್ತದೆ. ಆ ದಾಖಲೆಯಲ್ಲಿ ಘಟನೆಯ ಇತಿಹಾಸದ ಬಗ್ಗೆ ಬರೆದಿರುವುದಿಲ್ಲ.

ನನ್ನ ಮುಂದೆ ಯಾರು ಯಾರಿಗೆ ಚಾಕು ಹಾಕಿದರು ಎಂದು ನಾನು ನೋಡಿಲ್ಲದಿರುವುದರಿಂದ ಎಂ ಎಲ್ ಸಿ ರಿಜಿಸ್ಟರನಲ್ಲಿ ಮತ್ತು ಅಂಬುಲನ್ಸನ ದಾಖಲೆಯಲ್ಲಿ ನಮೂದು ಮಾಡಿಲ್ಲ ಎನ್ನುವುದು ಸುಳ್ಳು.

ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀಸವಾಲನ್ನು ಮಧ್ಯಾಹ್ನ – 2–45 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/–

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.

ಪಿಡಬ್ಲೂ. 5

ಸಾಕ್ಷಿಯನ್ನು ದಿ.21-08-2024 ರಂದು ಮಧ್ಯಾಹ್ನ 3-00 ಗಂಟೆಗೆ ಪುನಃ ಕರೆಸಿ ಪ್ರಮಾಣವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲುಃ- ಆರೋಪಿತರ ಪರ ಶ್ರೀ ಪಿ ಬಿ ವಕೀಲರಿಂದ.

ಪೊಲೀಸರಿಗೆ ಚಪಲಿಯನ್ನು ಯಾರು ಎಲ್ಲಿಂದ ತಂದು ಹಾಜರುಪಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಮಾಡಿದ ಮಹಜರ್ ಗೆ ನಾನು ರುಜು ಮಾಡಿರುವುದಿಲ್ಲ. ಪೊಲೀಸರು ಆಸ್ಪತ್ರೆಯಲ್ಲಿರತಕ್ಕ ಜನರು ಮತ್ತು ರೋಗಿ ಯಾರು ಇರುತ್ತಾರೆ ಎಂದು ಪೊಲೀಸರು ನನ್ನನ್ನು ಕೇಳಿರುವುದಿಲ್ಲ. ನಿಪಿ.11 ರ ನನ್ನ ಹೇಳಿಕೆಯಲ್ಲಿ ಚಾಕುವಿನಿಂದ ಹಲ್ಲೆ ಮಾಡಿರುತ್ತಾರೆ ಎಂದು ಸದರಿ ಹೇಳಿಕೆಯಲ್ಲಿ ಇರುವುದಿಲ್ಲ ಎನ್ನುವುದು ನಿಜ. ನಾನು ಮುಖ್ಯ ವಿಚಾರಣೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆ ಬಂದ ಮತ್ತು ಆಟೋದಲ್ಲಿ ಬಂದ ವ್ಯಕ್ತಿಗಳ ಮಧ್ಯ ಗಲಾಟೆ ಪ್ರಾರಂಭವಾಗಿದ್ದು ,ಮೊದಲು ಬಂದ ಕೇಸರಿ ಬಣ್ಣದ ಶರ್ಟ್ ಹಾಕಿದ ವ್ಯಕ್ತಿ ನೀಲಿ ಬಣ್ಣದ ಶರ್ಟ್ ಹಾಕಿದ ವ್ಯಕ್ತಿಗೆ ಚಾಕುವಿನಿಂದ ಚುಚ್ಚಿದ್ದ ಅಂತಾ ನಾನು ಪ್ರಥಮ ಬಾರಿ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ವಿನಃ ಪೊಲೀಸರ ಮುಂದೆ ಹೇಳಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ಮುಂದೆ ಹೇಳಿಕೆ ಕೊಡುವಾಗ ಚಾಕುವಿನಿಂದ ಹಲ್ಲೆ ಮಾಡಿದ ಬಗ್ಗೆ ಹೇಳಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರ ಮುಂದೆ ನಾನು ಹೇಳಿಕೆ ಕೊಡುವಾಗ ಚಾಕುವಿನಿಂದ ಚುಚ್ಚಿದ್ದಾರೆ ಎಂದು ಹೇಳಿಕೆ ನೀಡಿಲ್ಲದಿದ್ದರೂ ಸಹ ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಮ್ಮ ಆಸ್ಪತ್ರೆಗೆ ಆಟೋದಲ್ಲಿ ಕೆಲವು ಮಂದಿ ಬಂದಿದ್ದು , ಬಂದವರ ಮಧ್ಯ ಮತ್ತು ಆಟೋದಲ್ಲಿ ಬಂದವರ ಮಧ್ಯ ಗಲಾಟೆ ಪ್ರಾರಂಭವಾಗಿದ್ದು , ಮೊದಲು ಬಂದ ವ್ಯಕ್ತಿಗಳಲ್ಲಿ ಕೇಸರಿ ಶರ್ಟ್ ಹಾಕಿದ ವ್ಯಕ್ತಿ ನೀಲಿ ಬಣ್ಣದ ಶರ್ಟ್ ಹಾಕಿದವರಿಗೆ ಚಾಕುವಿನಿಂದ ಚುಚ್ಚಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಸಮಯದಲ್ಲಿ ಕಮಾರ ಮತ್ತು ಫಕ್ಕಿರಪ್ಪ ಇವರಿಗೆ ಗಾಯವಾಗಿತ್ತು , ಕುಮಾರ್ ಈತನ ಕುತ್ತಿಗೆ ಪೂರ್ಣ ಕೊಯ್ದಿತ್ತು , ರಕ್ತ ನಾಳ ಕಟ್ ಆಗಿ ರಕ್ತ ಕೆಳಗೆ ಹರಿದಿತ್ತು , ನಂತರ ಅಂಬುಲನ್ಸನಲ್ಲಿ ವಿರೇಂದ್ರ ಇವರ ಮೂಲಕ ದಾವಣಗೆರೆ ಸಿಜಿ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ಹಲ್ಲೆ ಮಾಡಿದ್ದಾರೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮೃತ ವ್ಯಕ್ತಿಗೆ ಅವರ ಅಣ್ಣ ಫಕ್ಕಿರಪ್ಪ ಈತನು ಚುಚ್ಚಿರುವುದರಿಂದ ಆತನೇ ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವುದರಿಂದ ನಮ್ಮ ಎಂ ಎಲ್ ಸಿ ರಿಜಿಸ್ಟರ್ ನಲ್ಲಿ ಮತ್ತು ಓಪಿಡಿ ರಿಜಿಸ್ಟರ್ ನಲ್ಲಿ ಯಾರು ಚುಚ್ಚಿರುತ್ತಾರೆ ಎಂದು ನಮೂದು ಮಾಡಿರುವುದಿಲ್ಲ ಎನ್ನುವುದು ಸುಳ್ಳು.

ಆಟೋದಲ್ಲಿ ಬಂದಂತಹ ವ್ಯಕ್ತಿಗಳು ಅವರೇ ಗಲಾಟೆ ಮಾಡಿಕೊಂಡು ಹೋಗಿರುವುದರಿಂದ 2 ನೇ ಓಪಿಡಿ ರಸೀದಿಯನ್ನು ನಾವು ಸೃಷ್ಟಿಸಿಕೊಂಡಿರುತ್ತೇವೆ ಎನ್ನುವುದು ಸುಳ್ಳು.

ಈ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ಪೊಲೀಸರು ಬಂದಿಲ್ಲ , ಮಹಜರ್ ಮಾಡಿಲ್ಲ , ಚಪ್ಪಲಿ ಮತ್ತು ರಕ್ತದ ಮಾದರಿ ಸಂಗ್ರಹಿಸಿಲ್ಲ ಎನ್ನುವುದು ಸರಿಯಲ್ಲ. ನ್ಯಾಯಾಲಯದ ಮುಂದೆ ಕೇಸರಿ ಮತ್ತು ನೀಲಿ ಬಣ್ಣದ ಶರ್ಟ್‌ಗಳು ಇಲ್ಲದಿದ್ದರೂ ಸಹ ಮು,ಮಾ.4 ಮತ್ತು 5 ಕೇಸರಿ ಮತ್ತು ನೀಲಿ ಬಣ್ಣದ ಶರ್ಟ್ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಯಾರು ಯಾರಿಗೆ ಯಾವುದರಿಂದ ಚುಚ್ಚಿರುತ್ತಾರೆ ಅಂತಾ ನನಗೆ ಸಂಪೂರ್ಣವಾಗಿ ಗೊತ್ತಿಲ್ಲದಿದ್ದರೂ ಸಹ ಪೊಲೀಸರ ಮಾತುಕೇಳಿ ಆರೋಪಿತರಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ಮುಖ್ಯ ವಿಚಾರಣೆಃ-</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಮಾರುತಿ ಮತ್ತು ರಾಜು ಇವರಿಗೆ ಸಂಬಂಧಪಟ್ಟಂತೆ ನಮ್ಮ ಆಸ್ಪತ್ರೆಯಿಂದ ಕೊಟ್ಟ ಎರಡು ಓಪಿಡಿ ರಿಜಿಸ್ಟರ್ ಎಕ್ಸಟ್ರಾಕ್ಟ ನೋಡುತ್ತಿದ್ದು , ಅವುಗಳನ್ನು ನಿಪಿ.12 ಮತ್ತು 13 ಎಂದು ಗುರುತಿಸಲಾಯಿತು. ಸದರಿ ಮಾರುತಿ ಮತ್ತು ರಾಜು ಇವರನ್ನು ಪರೀಕ್ಷೆ ಮಾಡಿದರ ಬಗ್ಗೆ ಎರಡು ಗಾಯದಪ್ರಮಾಣಪತ್ರ ನೋಡುತ್ತಿದ್ದು, ಅವುಗಳನ್ನು ನಿಪಿ.14 ಮತ್ತು 15 ಎಂದು ಗುರುತಿಸಲಾಯಿತು. ದಿ.23-05-2023 ರಂದು ಮುಖ ವೈದ್ಯಾಧಿಕಾರಿಗಳು , ಸಾರ್ವಜನಿಕ ಆಸ್ಪತ್ರೆ, ಹರಿಹರ ಇವರಿಗೆ ಮೃತ ಕುಮಾರ ಮತ್ತು ಫಕ್ಕಿರಪ್ಪ ಇವರ ಎಂ ಎಲ್ ಸಿ ಎಕ್ಸಟ್ರಾಕ್ಟ ದೃಢೀಕೃತ ಪ್ರತಿ ನೀಡುವಂತೆ ಪತ್ರ ಬರೆದಿದ್ದು, ಅದನ್ನು ನಿಪಿ.16 ಎಂದು ಗುರುತಿಸಲಾಯಿತು. ಹರಿಹರ ಪೊಲೀಸರಿಗೆ ನಾನು ಆ ದಿನ ಮಾಹಿತಿ ನೀಡಿದರ ಬಗ್ಗೆ ದೃಢೀಕೃತ ನಕಲು ನೋಡುತ್ತಿದ್ದು , ಅದನ್ನು ನಿಪಿ.17 ಎಂದು

ಗುರುತಿಸಲಾಯಿತು.

ಸದರಿ ಘಟನೆಯ ಬಗ್ಗೆ ಬೇರೆಯವರು ವಿಡಿಯೋ ಮಾಡಿದ್ದು ಆ ದೃಷ್ಯಾವಳಿಗಳನ್ನು ನಾನು ನೋಡಿದ್ದೇನೆ. ನಮ್ಮ ಆಸ್ಪತ್ರೆ ಸಿಬ್ಬಂದಿ ದೀಪಾ ಇವರು ವಿಡಿಯೋ ಮಾಡಿರುತ್ತಾರೆ, ಅವರಬಳಿಯಿಂದ ನಾನು ಆ ದೃಷ್ಯಾವಳಿಗಳನ್ನು ನೋಡಿದ್ದೇನೆ.

<u>ಮರು ಪಾಟೀಸವಾಲುಃ</u>- ಆರೋಪಿತರ ಪರ ಶ್ರೀ ಪಿ ಬಿ ವಕೀಲರಿಂದ.

ನಿಪಿ.12 ಮತ್ತು 13 ರಲ್ಲಿ ಓಪಿಡಿ ನಂ.39318 ಅಂತಾ ನಮೂದು ಆಗಿದೆ. ನಿಪಿ.17 ರಲ್ಲಿ ಪೊಲೀಸರಿಗೆ ಮಾಹಿತಿ ಕೊಟ್ಟಾಗ ಬೇರೆ ಇರುತ್ತದೆ ಎಂದು ಸಾಕ್ಷಿ ಉತ್ತರಿಸಿರುತ್ತಾರೆ. ನಿಪಿ.14 ಮತ್ತು 15 ಗಾಯದ ಪ್ರಮಾಣಪತ್ರದಲ್ಲಿ ನಮ್ಮ ಆಸ್ಪತ್ರೆಯಲ್ಲಿ ಗಾಲಟೆಯಾಗಿದ್ದರ ಬಗ್ಗೆ ನಮೂದು ಮಾಡಿರುವುದಿಲ್ಲ. ನಿಪಿ.17 ರಲ್ಲಿ ದಿನಾಂಕ ನಮೂದು ಮಾಡಿಲ್ಲ. ಪೊಲೀಸರು ನಿಪಿ.17 ನ್ನು ಸ್ವೀಕರಿಸಿದ ಬಗ್ಗೆ ದಿನಾಂಕ ನಮೂದು ಮಾಡಿಲ್ಲ ಎನ್ನುವುದು ಸರಿ. ಪೊಲೀಸರಿಗೆ ಸಹಾಯ ಮಾಡುವ ಸಲುವಾಗಿ ನಿಪಿ.12 ರಿಂದ 17 ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ.

ಒಬ್ಬ ವ್ಯಕ್ತಿಗೆ ಇಬ್ಬರುಜನ ಹೆಂಡತಿಯರು ಇದ್ದು ಆಸ್ತಿ ವಿಚಾರವಾಗಿ ಗಲಾಟೆಯಾಗಿದೆ ಎಂದು ನಂತರ ನನಗೆ ತಿಳಿದು ಬಂತು ಅಂತಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನಾನು ಇದೇ ಮೊದಲ ಬಾರಿಗೆ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ನಿಜ. ಇದರ ಬಗ್ಗೆ ಪೊಲೀಸರ ಮುಂದೆ ನಾನು ಹೇಳಿರುವುದಿಲ್ಲ ಎನ್ನುವುದು ನಿಜ.

ಘಟನಾವಳಿಯ ದೃಷ್ಯಾವಳಿಗಳನ್ನು ವಿಡಿಯೋ ಮಾಡಿದ್ದು, ಅದು ಎಷು ನಿಮಿಷ, ಎಷ್ಟು ಸೆಕೆಂಡ್ ಮಾಡಿರುತ್ತಾರೆ ಎನ್ನುವುದು ಗೊತ್ತಿಲ್ಲ. ನಾನು ನೋಡಿದ ವಿಡಿಯೋವನ್ನು ಪೊಲೀಸರಿಗೆ ನಾನು ಕೊಟ್ಟಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆಯುವ ಸಮಯದಲ್ಲಿ ದೀಪಾ ರವರ ಬಳಿ ವಿಡಿಯೋ ಇದೆ ಎಂದು ನಾನು ಹೇಳಿಲ್ಲ ಹಾಗೂ ಅದನ್ನು ಅವರಿಗೆ ಕೊಡಲು ಪ್ರಯತ್ನಪಟ್ಟಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರು, ದಾವಣಗೆರೆ.